ಇ) ಮೊಳಕಾಲ್ಮೂರು ತಾಲ್ಲೂಕಿನಲ್ಲಿ ಗ್ರಾಮೀಣ ಸಮುದಾಯವು ಯೋಜನಾ ವೆಚ್ಚದ ಶೇ. 10ರಷ್ಟು ಹಣವನ್ನು ಭರಿಸಲು ಮುಂದೆ ಬಂದಲ್ಲಿ, ಗುಣಮಟ್ಟ ಸಮಸ್ಯೆ ಇರುವಂತಹ ಗ್ರಾಮಗಳಿಗೆ ಸುರಕ್ಷಿತ ಕುಡಿಯುವ ನೀರಿನ ಪೂರೈಕೆಗಾಗಿ ಯೋಜನೆಗಳನ್ನು ಮಂಜೂರು ಮಾಡುವ ಕುರಿತು ಪರಿಶೀಲಿಸಲಾಗುವುದು.

ಸರ್ಕಾರಿ ಮುದ್ರಣಾಲಯದಲ್ಲಿನ ನಡೆದಿದೆ ಎನ್ನಲಾದ ಅವ್ಯವಹಾರದ ಬಗ್ಗೆ

2908 (2740) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) ಮಾನ್ಯ ವಯಸ್ಕರ ಶಿಕ್ಷಣ, ಗ್ರಂಥಾಲಯಗಳು, ಮುದ್ರಣ ಮತ್ತು ಲೇಖನ ಸಾಮಾಗ್ರಿಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪಾರದರ್ಶಕ ಕಾನೂನು ಜಾರಿಗೆ ಬಂದ ಮೇಲೆ ಸರ್ಕಾರಿ ಮುದ್ರಣಾಲಯದಲ್ಲಿ ಟೆಂಡರ್ ಕರೆಯುವಲ್ಲಿ ಮತ್ತು ಸಾಮಗ್ರಿಗಳನ್ನು ಖರೀದಿಸುವಲ್ಲಿ ನಡೆದಿರುವ ಅವ್ಯವಹಾರಗಳು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಎಷ್ಟು ಪ್ರಕರಣಗಳಲ್ಲಿ ಕಾನೂನು ಕ್ರಮ ತೆಗೆದುಕೊಳ್ಳಲಾಗಿದೆ;

ಇ) ಈ ರೀತಿಯ ಅವ್ಯವಹಾರ ತಡೆಗಟ್ಟಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಬಾಬುರಾವ್ ಚವ್ವಾಣ್ (ವಯಸ್ಕರ ಶಿಕ್ಷಣ, ಗ್ರಂಥಾಲಯಗಳು, ಮುದ್ರಣ ಮತ್ತು ಲೇಖನ ಸಾಮಾಗ್ರಿ ರಾಜ್ಯ ಸಚಿವರು)

ಅ) ಬಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ.

ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ಪದ್ಧತಿಯಲ್ಲಿ ಔಷಧ ಮತ್ತು ಉಪಕರಣಗಳ ಖರೀದಿಯ ಬಗ್ಗೆ

2910 (2742) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) ಮಾನ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪಾರದರ್ಶಕ ಕಾನೂನು ಜಾರಿಗೆ ಬಂದ ಮೇಲೆ, ಕಳೆದ ವರ್ಷದಿಂದ ಇಲ್ಲಿಯವರೆಗೆ ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋ ಪದ್ಧತಿಯಲ್ಲಿ ಕೊಳ್ಳಲಾದ ಔಷಧಗಳ ಮತ್ತು ಉಪಕರಣಗಳ ಒಟ್ಟು ಮೊತ್ತವೆಷ್ಟು;

ಆ) ವಿಶೇಷ ಸಂದರ್ಭಗಳಲ್ಲಿ ಹೊರೆ ರಾಜ್ಯಗಳಿಂದ ಕೊಳ್ಳಲಾದ ಹೋಮಿಯೋ ಪದ್ಧತಿ ಮತ್ತು ಭಾರತೀಯ ಪದ್ಧತಿಯ ಔಷಧಿಗಳ ಒಟ್ಟು ಮೊತ್ತ ಎಷ್ಟು;

ಇ) ಸದರಿ ಔಷಧಿಗಳನ್ನು ಪ್ರತಿಯೊಂದು ಜಿಲ್ಲೆಗೆ ಸಮರ್ಪಕವಾಗಿ ಹಂಚಿಕೆ ಮಾಡಲಾಗಿದೆಯೇ;

ಈ) ಹಾಗಿದ್ದಲ್ಲಿ, ಪ್ರತಿಯೊಂದು ಜಿಲ್ಲೆಗೆ ಒದಗಿಸಲಾದ ಔಷಧಿಯ ವಿವರಗಳನ್ನು ಒದಗಿಸುವುದು?

ಶ್ರೀಮತಿ ನಫೀಸ ಫಜಲ್ (ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ರಾಜ್ಯ ಸಚಿವರು)

ಅ) ಪಾರದರ್ಶಕ ಕಾನೂನು ಜಾರಿಗೆ ಬಂದ ಮೇಲೆ ಕಳೆದ 2002–03ನೇ ಸಾಲಿನ ಆರ್ಥಿಕ ವರ್ಷದಿಂದ ಇಲ್ಲಿಯವರೆಗೆ ಔಷಧಿಗಳ ಮತ್ತು ಉಪಕರಣಗಳ ಕೊಳ್ಳಲಾದ ಒಟ್ಟು ಮೊತ್ತ ಕ್ರಮವಾಗಿ ರೂ. 135.52 ಲಕ್ಷಗಳು ಮತ್ತು ರೂ. 8.87 ಲಕ್ಷಗಳು.

ಆ) ಸರ್ಕಾರದಿಂದ ನಿಗದಿಪಡಿಸಿರುವ ದರ ಗುತ್ತಿಗೆಯ ಆಧಾರದ ಮೇಲೆ ಅಂಗೀಕೃತಗೊಂಡ ದರ ಗುತ್ತಿಗೆ ಸಂಸ್ಥೆಗಳಿಂದ ಔಷಧಿಗಳ ಖರೀದಿಯನ್ನು ಮಾಡಲಾಗುತ್ತಿದೆ. ಹೊರ ರಾಜ್ಯಗಳಿಂದ ಪ್ರತ್ಯೇಕವಾಗಿ ಯಾವುದೇ ಔಷಧಿ ಖರೀದಿ ಮಾಡಿರುವುದಿಲ್ಲ.

ಇ) ಹೌದು.

ಈ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ

	ಜಿಲ್ಲೆ	ಆಯುರ್ವೇದ	ಯುನಾನಿ	ಹೋಮಿಯೋಪತಿ
ಮೈಸೂರು ವಿಭಾಗ				
1.	ಮೈಸೂರು	2.79	0.07	–
2.	ಚಾಮರಾಜನಗರ	1.26	0.15	–
3.	ಮಂಡ್ಯ	1.30	0.15	–
4.	ಚಿಕ್ಕಮಗಳೂರು	3.23	0.08	–
5.	ದಕ್ಷಿಣ ಕನ್ನಡ	0.61	0.15	–
6.	ಕೊಡಗು	0.85	–	–
7.	ಉಡುಪಿ	0.52	–	–
ಬೆಳಗಾಂ ವಿಭಾಗ				
1.	ಬೆಳಗಾಂ	2.18	0.07	1.50
2.	ಬಾಗಲಕೋಟೆ	1.44	0.07	–
3.	ಬಿಜಾಪುರ	0.86	–	0.18
4.	ಗದಗ್	1.46	–	0.54
5.	ಹಾವೇರಿ	0.89	0.07	0.46
6.	ಧಾರವಾಡ	0.79	–	0.18
7.	ಕಾರವಾರ	0.10	–	–
ಬೆಂಗಳೂರು ವಿಭಾಗ				
1.	ಕೋಲಾರ	1.03	0.14	–
2.	ಶಿವಮೊಗ್ಗ	2.32	–	–
3.	ತುಮಕೂರು	2.39	–	–
4.	ದಾವಣಗೆರೆ	2.65	–	–
5.	ಚಿತ್ರದುರ್ಗ	–	–	–
6.	ಬೆಂಗಳೂರು ನಗರ	0.84	0.14	0.30
7.	ಬೆಂಗಳೂರು ಗ್ರಾ.	1.21	0.35	0.08

	1	2	3	4
ಗುಲ್ಬರ್ಗಾ ವಿಭಾಗ				
1.	ಗುಲ್ಬರ್ಗಾ	3,23,200	1,12,800	1,26,000
2.	ಬಳ್ಳಾರಿ	5,64,800	7,200	54,000
3.	ಬೀದರ್	1,34,400	36,000	18,000
4.	ರಾಯಚೂರು	86,400	82,400	–
5.	ಕೊಪ್ಪಳ	1,59,200	7,200	18,000

ವಿಶ್ವೇಶ್ವರ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರದ ಬಗ್ಗೆ

2911 (2743) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ಪ್ರಸ್ತುತ ಮತ್ತು ಹಿಂದಿನ ಉಪಕುಲಪತಿಗಳ ಅವಧಿಯಲ್ಲಿ ಎಷ್ಟು ಸಂದರ್ಭಗಳಲ್ಲಿ ಅಂಕಪಟ್ಟಿಗಳನ್ನು ತಿದ್ದಿರುವುದು ಮತ್ತು ಉತ್ತರ ಪತ್ರಿಕೆಯ ಮೌಲ್ಯಮಾಪನದಲ್ಲಿ ಅಕ್ರಮ ನಡೆದಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಹಾಗಿದ್ದಲ್ಲಿ, ಇಂತಹ ಅವ್ಯವಹಾರಗಳ ಪ್ರಕರಣಗಳ ಸಂಖ್ಯೆ ಎಷ್ಟು ಹಾಗೂ ಇಂತಹ ಅವ್ಯವಹಾರಗಳಲ್ಲಿ ಭಾಗಿಯಾದ ಅಧಿಕಾರಿಗಳ ವಿರುದ್ಧ ಮೊಕದ್ದಮೆ ಹೂಡಲಾಗಿದೆಯೇ; ಹಾಗಿದ್ದಲ್ಲಿ, ಆ ಮೊಕದ್ದಮೆಗಳು ಈಗ ಯಾವ ಹಂತದಲ್ಲಿವೇ;

ಇ) ಈ ರೀತಿಯ ಅಕ್ರಮಗಳನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡ ಮುನ್ನೆಚ್ಚರಿಕೆಯ ಕ್ರಮಗಳೇನು?

ಡಾ॥ ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು)

ಅ) ಅಂಕಪಟ್ಟಿ ತಿದ್ದಿದ ನಾಲ್ಕು ಪ್ರಕರಣಗಳು ಹಾಗೂ ಉತ್ತರ ಪತ್ರಿಕೆಯ ಮೌಲ್ಯಮಾಪನದಲ್ಲಿ ಅಕ್ರಮ ನಡೆದಿರುವ ನಾಲ್ಕು ಪ್ರಕರಣಗಳು ಪ್ರಸ್ತುತ ಉಪಕುಲಪತಿಯವರ ಅವಧಿಯಲ್ಲಿ ಬೆಳಕಿಗೆ ಬಂದಿವೆ.

ಆ) ಅಂಕಪಟ್ಟಿ ತಿದ್ದಿದ ಮೂರು ಪ್ರಕರಣಗಳು ಮತ್ತು ಗಣಕಯಂತ್ರದ ಮೂಲಕ ತಿದ್ದಿದ ಒಂದು ಪ್ರಕರಣ ಹಾಗೂ ಉತ್ತರ ಪತ್ರಿಕೆಯ ಮೌಲ್ಯಮಾಪನದಲ್ಲಿ ಅಕ್ರಮ ನಡೆದಿರುವ ನಾಲ್ಕು ಪ್ರಕರಣಗಳು ಪತ್ತೆಯಾಗಿರುವುದಾಗಿ ಇತ್ತೀಚೆಗೆ ವಿಶ್ವವಿದ್ಯಾಲಯ ವರದಿ ಮಾಡಿದೆ. ಮೊಕದ್ದಮೆ ಹೂಡಲಾಗಿಲ್ಲ. ಆದರೆ ಭಾಗಿಯಾಗಿದ್ದ ಮೂರು ಜನ ವಿಶ್ವವಿದ್ಯಾಲಯದ ನೌಕರರನ್ನು ಕೆಲಸದಿಂದ ವಜಾ ಮಾಡಲಾಗಿದೆ. ವಿದ್ಯಾರ್ಥಿಗಳ ಫಲಿತಾಂಶವನ್ನು ಹಿಂದಕ್ಕೆ ಪಡೆಯಲಾಗಿದೆ. ಸಂಯೋಜಿತ ಕಾಲೇಜುಗಳ ನಾಲ್ಕು ಅದ್ಯಾಪಕರನ್ನು ಖಾಯಂ ಆಗಿ ವಿಶ್ವ ವಿದ್ಯಾಲಯದ ಗೌಪ್ಯ ಕೆಲಸದಿಂದ ಹೊರಗಿಡಲಾಗಿದೆ.

ಇ) ವಿಶ್ವವಿದ್ಯಾಲಯ ಈ ಕೆಳಕಂಡ ಸುರಕ್ಷತ ಕ್ರಮಗಳನ್ನು ಅಳವಡಿಸಿಕೊಂಡಿದೆ.

1. Malpractice Committee ಯನ್ನು ರಚಿಸಲಾಗಿದೆ.
2. ಅಂಕಪಟ್ಟಿ ಸಿದ್ಧತೆಯ ಕಾರ್ಯ ವಿಧಾನದಲ್ಲಿ ಸುರಕ್ಷತ ಕ್ರಮಗಳನ್ನು ಅಳವಡಿಸಲಾಗಿದೆ.
3. ಪ್ರತಿಯೊಂದು ಹಂತದಲ್ಲಿ ಮೇಲ್ವಿಚಾರಣೆಗೆ ಹಾಗೂ ಪರಿಶೀಲನೆ ಮಾಡಲಾಗುತ್ತಿದೆ.